ಕರ್ನಾಟಕ ವಿಧಾನಸಭೆ

ಮಂಗಳವಾರ 24 ನೇ ಅಕ್ಟೋಬರ್ 2000 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಡಾ॥ ರಾಜ್‌ಕುಮಾರ್ ಅಪಹರಣ ಕುರಿತು- ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ಶ್ರೀ ಜಗದೀಶ್ ಶೆಟ್ಟರ(ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಧ್ಯಕ್ಷರೇ, ಡಾ॥ ರಾಜ್‌ಕುಮಾರ್‌ರವರ ಅಪಹರಣವಾಗಿ ಇವತ್ತಿಗೆ 85 ದಿವಸಗಳಾಗಿದ್ದು, ಇಡೀ ರಾಜ್ಯದಲ್ಲಿಯೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಯನ್ನು ತಮಗೆ ಈಗಾಗಲೇ ಕಳುಹಿಸಿದ್ದು ಈ ವಿಷಯವನ್ನು ಮೊದಲು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದು ಬಹಳ ಮಹತ್ವವಾದ ವಿಚಾರವಾಗಿದೆ.

(ಗೊಂದಲ)

ಅಧ್ಯಕ್ಷರು ಪ್ರಶ್ನೋತ್ತರಗಳು ಮುಗಿದ ನಂತರ ತಾವು ತಂದಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಪ್ರಶ್ನೋತ್ತರಗಳು ಲ್ಯಾಪ್ಸ್ ಆಗುತ್ತದೆ. ಯಾವುದು ಬೇಕು ಹೇಳಿ.

ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಅಧ್ಯಕ್ಷರೇ, ತಾವು ಇದನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಡುವುದಾದರೆ ಪ್ರಶ್ನೋತ್ತರ ವೇಳೆ ಆದನಂತರ ಇದನ್ನು ತೆಗೆದುಕೊಳ್ಳಬೇಕು ಏಕೆಂದರೆ ಇದು ಅತ್ಯಂತ ಗಂಭೀರವಾದ ವಿಚಾರ, ಉಳಿದ ಎಲ್ಲಾ ವಿಚಾರಗಳನ್ನು ಬದಿಗಿಟ್ಟು ಇದನ್ನು ತೆಗೆದುಕೊಳ್ಳಬೇಕು ಎಂದು ಹೇಳುವುದು ನಮ್ಮ ಅನಿಸಿಕೆ. ಪ್ರಶ್ನೋತ್ತರ ವೇಳೆಗಿಂತ ಇವತ್ತು ಇಡೀ ರಾಜ್ಯದ ಪ್ರಶ್ನೆ ಇದಾಗಿರುವುದರಿಂದ ಬಹುಶಃ ಪ್ರಶ್ನೋತ್ತರ ವೇಳೆ ಎನ್ನತಕ್ಕಂಥದ್ದು ಮುಖ್ಯವಾದ ವಿಚಾರವಲ್ಲ.

ಅಧ್ಯಕ್ಷರು:- ಇದು ಎಲ್ಲದಕ್ಕಿಂತ ಬಹಳ ಮುಖ್ಯವಾದ ವಿಚಾರ ಎಂಬುದನ್ನು ನಾನೂ ಸಹ ಒಪ್ಪಕೊಳ್ಳುತ್ತೇನೆ. ನನ್ನದು ಏನೂ ಅಭ್ಯಂತರವಿಲ್ಲ. ಆದರೆ ತಾವು ಪ್ರಶ್ನೋತ್ತರ ವೇಳೆಯನ್ನು ಕಳೆದುಕೊಳ್ಳುತ್ತೀರಿ. ಈಗ ಚರ್ಚೆಗೆ ಈ ವಿಚಾರವನ್ನು ತೆಗೆದುಕೊಳ್ಳೋಣ. ಆದರೆ ಪ್ರಶ್ನೋತ್ತರ ವೇಳೆಯನ್ನು ಅಬಾಲಿಷ್ ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ :- ಇಡೀ ರಾಜ್ಯದ ಜನ ಇದರ ಬಗ್ಗೆ ನೋಡುತ್ತಿದ್ದಾರೆ.

ಅಧ್ಯಕ್ಷರು:- ಈ ವಿಚಾರ ಚರ್ಚೆಗೆ ಬೇಡವೆಂದು ನಾನು ಹೇಳುತ್ತಿಲ್ಲ. ಪ್ರಶ್ನೋತ್ತರ ವೇಳೆಯನ್ನು ಅಬಾಲಿಷ ಮಾಡಿ ಚರ್ಚೆಗೆ ತೆಗೆದುಕೊಳ್ಳೋಣವೆ?

ಶ್ರೀ ಯು. ಆರ್. ಸಭಾಪತಿ:- ಪ್ರಶ್ನೋತ್ತರ ವೇಳೆ ಇರಲಿ.

ಶ್ರೀ ವಿಜಯ ಕುಮಾರ ಶೆಟ್ಟಿ:- ಈ ವಿಚಾರದಲ್ಲಿ ತಮಗೆ ಇರುವಷ್ಟು ಕಳಕಳಿ ನಮಗೂ ಇದೆ. ಆದರೆ ಪ್ರಶ್ನೋತ್ತರ ವೇಳೆಯು ಸಹ ಬಹಳ ಮುಖ್ಯವಾದದ್ದು.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ:- ಪ್ರಶ್ನೋತ್ತರ ವೇಳೆಯನ್ನು ಇನ್ನೊಂದು ದಿನ ತೆಗೆದುಕೊಳ್ಳಬಹುದು.

ಶ್ರೀ ವಿಜಯಕುಮಾರ ಶೆಟ್ಟಿ:- ಇಲ್ಲ, ಪ್ರಶ್ನೋತ್ತರ ವೇಳೆಯನ್ನು ಈಗಲೇ ತೆಗೆದುಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗ ಈ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ತೆಗೆದುಕೊಳ್ಳುವುದಕ್ಕೆ ನನ್ನ ಮೊದಲನೆಯ ಅಬ್ಜಕ್ಷನ್ ಏನೆಂದರೆ,..... ಅಧ್ಯಕ್ಷರೇ, ತಾವು ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಿ, ನಂತರ ಅವರು ಮಂಡಿಸಿರತಕ್ಕಂತಹ ನಿಲುವಳಿ ಸೂಚನೆಗೆ ನಾವು ಉತ್ತರ ಕೊಡುತ್ತೇವೆ. ಅದು ಯಾವ ಫಾರ್‌ಮೇಟ್‌ನಲ್ಲಿ ಬಂದಿದೆ? ಅದನ್ನು ಚರ್ಚೆಗೆ ತೆಗೆದುಕೊಳ್ಳಬಹುದಾ ಹೇಗೆ? ಇವತ್ತು ಈ ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಮುಂದೆ ಪೆಂಡಿಂಗ್ ಇದೆ. ಇದರ ಬಗ್ಗೆ ಮುಂದೆ ಮಾತನಾಡೋಣ, ಮೊದಲು ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:- ಆದರೆ ನಿಲುವಳಿ ಸೂಚನೆಯು ಬಹಳ ಮಹತ್ವದ್ದಾಗಿರುವುದರಿಂದ ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಇದನ್ನು ತೆಗೆದುಕೊಳ್ಳುವುದು ಅವಶ್ಯಕತೆ ಇದೆ.

ಅಧ್ಯಕ್ಷರು:- ಪ್ರಶ್ನೆಗಳು ನಿಮ್ಮದಷ್ಟೇ ಇಲ್ಲ, ಎಲ್ಲಾ ಪಕ್ಷದವರದು ಸಹ ಇದೆ. ತಾವು ಹೇಳುವುದನ್ನು ನಾನು ಒಪ್ಪುತ್ತೇನೆ, ಆದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಪ್ರಶ್ನೋತ್ತರ ವೇಳೆಯನ್ನು ಮೊದಲು ತೆಗೆದುಕೊಳ್ಳಬೇಕೋ ಅಥವಾ ಈ ವಿಚಾರ ಚರ್ಚೆಯಾದ ನಂತರ ತೆಗೆದುಕೊಳ್ಳಬೇಕೋ ಎಂಬುದು ಇಲ್ಲಿ ಬಂದಿರುವ ಪ್ರಶ್ನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೋತ್ತರವನ್ನು ಮತ್ತೊಂದು ದಿವಸ ತೆಗೆದುಕೊಳ್ಳಬಹುದು.

ಅಧ್ಯಕ್ಷರು:- ಪ್ರಶ್ನೆಗಳು ಬೇರೆಯವರದು ಸಹ ಇದೆ, ಅವರನ್ನು ಕೇಳಬೇಕಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಈ ಗಾಗಲೇ ನಿನ್ನೆಯ ಬಿಸಿನೆಸ್ ಅಡ್ವೈಸರಿ ಸಮಿತಿಯ ಸಭೆಯಲ್ಲಿ ಅಧಿವೇಶನವನ್ನು ಇನ್ನು ಕೆಲವು ದಿವಸಗಳ ಕಾಲ ಮುಂದುವರೆಸುವ ಬಗ್ಗೆ ಚರ್ಚೆ ಮಾಡಿದ್ದೇವೆ. ಬಹುಶಃ ಕೊನೆಯ ದಿನಗಳಲ್ಲಿ ಇವತ್ತಿನ ಪ್ರಶ್ನೆಗಳನ್ನು ತೆಗೆದು ಕೊಳ್ಳಬಹುದು.

ಅಧ್ಯಕ್ಷರು:- ಮಾನ್ಯ ಸದಾನಂದಗೌಡರೇ, ತಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಂಡಿರುತ್ತೇನೆ. ತಮ್ಮ ಪಕ್ಷದ ಹಾಗೂ ಇತರ ಪಕ್ಷಗಳ ಪ್ರಶ್ನೆಗಳು ಇವೆ. ಮಾನ್ಯ ಸಿಂಧ್ಯಾರವರೇ, ತಾವು ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಕನಕಪುರ) :- ಮಾನ್ಯ ಅಧ್ಯಕ್ಷರೇ ಈಚಿನ ದಿನಗಳಲ್ಲಿ ರಾಜ್ಯದಲ್ಲಿ ವಿಪರೀತವಾಗಿ ಮಳೆ ಬಿದ್ದು ನೂರಾರು ಕೋಟಿ ರೂಪಾಯಿಗಳು ನಷ್ಟವಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ರೈತರು ಬಹಳ ಸಂಕಷ್ಟದಲ್ಲಿ ಇದ್ದಾರೆ. ಈ ಒಂದು ಅನಾಹುತದಿಂದ ನೂರಾರು ಜನರು ಸತ್ತಿದ್ದಾರೆ. ಇವರೆಲ್ಲರೂ ಸರ್ಕಾರದ ಸಹಾಯಕ್ಕಾಗಿ ಯೋಚನೆ ಮಾಡುವಂತಹ ಸ್ಥಿತಿಯಲ್ಲಿದ್ದಾರೆ. ಇಂತಹ ಒಂದು ಸನ್ನಿವೇಶದ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ವತಿಯಿಂದ ನಾವು ಇದರ ಬಗ್ಗೆ ಚರ್ಚೆ ಮಾಡಲು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಈ ವಿಷಯದ ಬಗ್ಗೆ ಚರ್ಚೆಯಾಗಬೇಕಾಗಿರುವುದು ಅತಿ ಅಗತ್ಯವಾಗಿದೆ. ಈ ಬಗ್ಗೆ ಸರ್ಕಾರದವರು ತ್ವರಿತವಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ರಾಜ್ಯದಲ್ಲಿ ಅವ್ಯಾಹತವಾಗಿ ಮಳೆಯಿಂದ ಜಲಪ್ರಳಯ ಆಗುತ್ತಲೇ ಇದೆ, ಆದರಿಂದಾಗಿ ನಾವು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಯಾರು ನಿರಾಶ್ರಿತರಾಗಿದ್ದಾರೆ ಅವರ ಪರಿಹಾರಕ್ಕಾಗಿ ನಾವು ಹೋಗಬೇಕಾಗಿರುವುದು ಈ ಸದನದ ಸದಸ್ಯರೆಲ್ಲರ ಆದ್ಯಕರ್ತವ್ಯ ಎನ್ನುವ ದೃಷ್ಟಿಯಿಂದ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಗೆ ನಾವು ನೋಟೀಸನ್ನು ಕೊಟ್ಟಿದ್ದೇವೆ.

ಪ್ರಶ್ನೋತ್ತರದ ನಂತರ ನಾವು ತಂದಿರತಕ್ಕಂತಹ ಈ ನಿಲುವಳಿ ಸೂಚನೆಗೆ ಮೊದಲನೇ ಆದ್ಯತೆಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಹಾಗೆಯೇ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯನ್ನು ಕಾಪಾಡುವುದಕ್ಕೋಸ್ಕರ ಡಾ॥ ರಾಜ್‌ಕುಮಾರ್‌ರವರ ಅಪಹರಣದ ಹಿನ್ನೆಲೆಯಲ್ಲಿ ಮತ್ತು ಅವರು ಬಿಡುಗಡೆಯಾಗತಕ್ಕಂತಹ ವಿಚಾರದಲ್ಲಿ ನಿಯಮ-68 ರ ಅಡಿಯಲ್ಲಿ ಚರ್ಚೆಯಾಗಬೇಕೆನ್ನುವ ವಿಚಾರವನ್ನು ನಾವು ತಮ್ಮ ಸನ್ನಿಧಿಗೆ ಈಗಾಗಲೇ ನಮ್ಮ ಪಕ್ಷದ ವತಿಯಿಂದ ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದೇವೆ. ಅದಕ್ಕೂ ಸಹಿತ ತಾವು ಮಾನ್ಯ ಗೃಹಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕುರುಗಳ ಜೊತೆ ಮಾತನಾಡಿ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯವನ್ನು ನಿಗದಿಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಯು. ಆರ್. ಸಭಾಪತಿ(ಉಡುಪಿ) :- ಮಾನ್ಯ ಅಧ್ಯಕ್ಷರೇ, ಇಂದು ಡಾ॥ ರಾಜ್‌ಕುಮಾರ್‌ರವರ ಅಪಹರಣದ ಬಗ್ಗೆ ಮಾನ್ಯ ವಿರೋದ ಪಕ್ಷದ ನಾಯಕರು ತಂದಿರತಕ್ಕಂತಹ ನಿಲುವಳಿ ಸೂಚನೆ ಏನಿದೆ ಅದು ಮಹತ್ವಪೂರ್ಣವಾದದ್ದು, ಅದನ್ನು ನಾನು ಇಲ್ಲವೆಂದು ಹೇಳುತ್ತಿಲ್ಲ. ಸದನ 6 ತಿಂಗಳ ನಂತರ ಈಗ ಮತ್ತೆ ಸೇರಿದ್ದು ನಮ್ಮದು ಬಹಳ ಮಹತ್ವಪೂರ್ಣವಾದ ಪ್ರಶ್ನೆಗಳು ಇವೆ. ಆದುದರಿಂದ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲವೆಂದು ಕಾಣುತ್ತದೆ. ಆದುದರಿಂದ ದಯವಿಟ್ಟು ತಾವು ಮೊದಲು ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯಗೊಳಿಸಿ ಆನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಈ ವಿಷಯವನ್ನು ವೇದಿಕೆಯ ಮೇಲೆ ತರಬಾರದು ಎಂದು ಅವರು ವಿಚಾರ ಮಾಡುತ್ತಿದ್ದಾರೆ, ಹಾಗೆಯೇ ಈ ವಿಷಯವನ್ನು ಡೈಲ್ಯೂಟ್ ಮಾಡುವುದಕ್ಕೆ ಪ್ರಯತ್ನ

ಮಾಡುತ್ತಿದ್ದಾರೆ. ಈ ವಿಷಯವನ್ನು ಸದನದ ಮುಂದೆ ತರಬಾರದು ಎನ್ನತಕ್ಕ ದೊಡ್ಡ ಪ್ರಶ್ನೆ ಇಲ್ಲಿ ಕಾಣುತ್ತಿದೆ.

ಅಧ್ಯಕ್ಷರು:- ಇಲ್ಲಿ ಆ ವಿಷಯ ತರಬಾರದು ಎನ್ನುವಂತಹ ಪ್ರಶ್ನೆಯಲ್ಲಿ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ನಮ್ಮ ಮುಂದೆ ಇರತಕ್ಕಂತಹ ಪ್ರಶ್ನೆ ಏನೆಂದರೆ, ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳಬೇಕೋ ಅಥವಾ ಅದಕ್ಕಿಂತ ಮೊದಲೇ ತೆಗೆದುಕೊಳ್ಳಬೇಕೋ ಎನ್ನತಕ್ಕಂತಹ ಪ್ರಶ್ನೆ ನಮ್ಮ ಮುಂದೆ ಇದೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :- ಮಾನ್ಯ ಅಧ್ಯಕ್ಷರೇ, ನಾವು ಏನು ಮಾಡಿದ್ದೇವೆ. ಏನು ಮಾಡಿಲ್ಲ ಎಂಬುದನ್ನು ಜನರಿಗೆ ತಿಳಿಸುವುದಕ್ಕೋಸ್ಕರ ನಾವು ಪ್ರಶ್ನೆಗಳನ್ನು ಹಾಕುತ್ತಿದ್ದೇವೆ. ನಮಗೋಸ್ಕರ ನಾವು ಏನೂ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಿಲ್ಲ. ಈ ಮನೆಯ ಎಲ್ಲ ಸದಸ್ಯರ ಪ್ರಶ್ನೆಗಳು ಇವೆ. ಆದ್ದರಿಂದ ದಯಮಾಡಿ ಪ್ರಶ್ನೋತ್ತರ ವೇಳೆಯನ್ನು ಯಾವುದೇ ಕಾರಣಕ್ಕೂ ರದ್ದು ಮಾಡದೆ, ಅವರಿಗೆ ಬೇರೆ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು ಇವತ್ತಿನ ದಿವಸ ಪ್ರಶ್ನೋತ್ತರದಲ್ಲಿ ಬಹಳ ಮಹತ್ವಪೂರ್ಣವಾದ ಪ್ರಶ್ನೆಗಳು ಇವೆ. ಡಾ॥ ರಾಜ್‌ಕುಮಾರ್‌ರವರ ಬಗ್ಗೆ ನಮಗೆ ಆಗೌರವವಿಲ್ಲ ಅವರ ಭಾವನೆಗಳನ್ನು ನಾವೆಲ್ಲರೂ ಸಹ ಗೌರವಿಸುತ್ತೇವೆ. ಅವರ ಬಗ್ಗೆ ನಮ್ಮ ಸರ್ಕಾರ ಇದುವರೆವಿಗೂ ಏನೂ ಮಾಡಿದೆ ಅದರ ಬಗ್ಗೆ ನಾನು ಬಹಳ ಶ್ಲಾಘನೀಯವಾಗಿ, ಸರ್ಕಾರಕ್ಕೆ ವಂದಿಸುತ್ತೇವೆ. ದಯಮಾಡಿ ಯಾವುದೇ, ಕಾರಣಕ್ಕೂ ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡುವುದು ಸೂಕ್ತವಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಈ ವಿಚಾರದ ಬಗ್ಗೆ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಕೇಳುವಂತದ್ದಲ್ಲ. ಈಗ ಸದನವು 6 ತಿಂಗಳ ನಂತರ ಸಮಾವೇಶಗೊಳ್ಳುತ್ತಿದೆ. ಇದಕ್ಕೆ ಕಾರಣಕರ್ತರು ಯಾರು? ಆಡಳಿತ ಪಕ್ಷದವರು ನನ್ನ ಪ್ರಶ್ನೆಗೆ ಇನ್ನು ಕಾಲಾವಕಾಶ ಬೇಕು ಎಂದು ಕೇಳುತ್ತಿದ್ದಾರೆ. ನಿನ್ನೆ ನಡೆದ ಬಿ ಎ ಸಿ ಮೀಟಿಂಗ್‌ನಲ್ಲಿ ಸದನವನ್ನು ಇನ್ನು ಒಂದು ವಾರಗಳ ಕಾಲ ಎಕ್ಸ್‌ಟೆಂಡ್ ಮಾಡಿದ್ದಾರೆ. ಪ್ರಶ್ನೆಗಳನ್ನು ಕೇಳುವುದಕ್ಕೆ ಇಲ್ಲಿ ಇನ್ನೂ ಅವಕಾಶವಿರುತ್ತದೆ. ಇದೇ ಪ್ರಶ್ನೆಯನ್ನು ಮತ್ತೊಂದು ದಿವಸ ಇಟ್ಟುಕೊಳ್ಳಬಹುದು ಡಾ॥ ರಾಜ್‌ಕುಮಾರರವರ ಅಪಹರಣದ ವಿಚಾರ ಒಂದು ಸಾರ್ವಜನಿಕ ಕಾಳಜಿಯ ವಿಷಯವಾಗಿರುತ್ತದೆ. ಮೊದಲು ಎಲ್ಲ ಬಿಸಿನೆಸ್‌ಗಳನ್ನು ಸಸ್ಪೆಂಡ್ ಮಾಡಿ ಈ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕಾದಂತಹ ವಿಷಯವಾಗಿರುತ್ತದೆ. ನಾವು ಡಾ॥ ರಾಜ್‌ಕುಮಾರರವರ ಅಪಹರಣದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿರುತ್ತೇವೆ, ಆದ್ದರಿಂದ ಈ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕೆಂಬುದು ನಮ್ಮ ಕಾಳಜಿಯಾಗಿರುತ್ತದೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರದ ಬಗ್ಗೆ ನಮಗೆ ಗೌರವ ಇಲ್ಲವೆಂದು ನಾವು ಹೇಳಲಿಲ್ಲ ಸದನದಲ್ಲಿ ಜನರ ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆಯುವುದಕ್ಕೆ ಪ್ರಶ್ನೋತ್ತರ ವೇಳೆ ಅಗತ್ಯವಾಗಿದೆ. ಇಡೀ ಕರ್ನಾಟಕ ರಾಜ್ಯದ ಜನ ಈ ಸದನದಲ್ಲಿ ಏನು ನಡೆಯುತ್ತದೆ ಎಂದು ನೋಡುತ್ತಿದ್ದಾರೆ. ಈಗ ಮೂರು ತಿಂಗಳಿಂದ ರಾಜ್ಯದ ಪರಿಸ್ಥಿತಿ ಅಸ್ಥವ್ಯಸ್ಥವಾಗಿದೆ. ಮಳೆಯಿಂದ ಹಾನಿಗೊಳಗಾದವರಿಗೆ ಪರಿಹಾರ ನೀಡುವ ಕೆಲಸವಾಗಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದು ಮಹತ್ವದ್ದಾಗಿದೆ. ದಯಮಾಡಿ ತಾವು ಇದರ ಬಗ್ಗೆ ಒಂದು ನಿರ್ಧಾರಕ್ಕೆ ಬರಬೇಕು.

ಅಧ್ಯಕ್ಷರು:- ಆಯಿತು, ಇದರ ಬಗ್ಗೆ ಮಾನ್ಯ ಗೃಹ ಸಚಿವರನ್ನು ಕೇಳಿ ನೋಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಎಲ್ಲರನ್ನು ಕೇಳಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದರೆ ಇದು ಹೇಗೆ?

ಅಧ್ಯಕ್ಷರು:- ಕ್ಷಮಿಸಿ, ನಿಮಗೆಷ್ಟು ಹಕ್ಕು ಇದೆಯೋ ಅವರಿಗೂ ಅಷ್ಟೇ ಹಕ್ಕು ಇರುತ್ತದೆ. ಅರೀತಿ ಮಾತನಾಡಬಾರದು. ಸರ್ಕಾರದವರು ಏನು ಹೇಳುತ್ತಾರೋ ನೋಡೋಣ. ಮಾನ್ಯ ಖರ್ಗೆಯವರೆ, ಪ್ರಶ್ನೋತ್ತರ ವೇಳೆಯನ್ನು ಈಗ ತೆಗೆದುಕೊಳ್ಳೋಣವೇ ಅಥವಾ ನಂತರ ತೆಗೆದುಕೊಳ್ಳೋಣವೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೋತ್ತರ ವೇಳೆ ಆಗಿದೆ, ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ಇಲ್ಲವೆಂದರೆ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ. ಪ್ರಶ್ನೋತ್ತರ ವೇಳೆಯ ನಂತರ ಅವರು ಪ್ರಸ್ತಾವ ಮಾಡಲಿ. ತಾವು ಚರ್ಚೆಗೆ ಅವಕಾಶ ಮಾಡಿ ಕೊಡುತ್ತೀರೋ, ಇಲ್ಲವೋ ಎನ್ನತಕ್ಕಂತದ್ದದನ್ನು ಯೋಚನೆ ಮಾಡೋಣ. ಆದರೆ ಈ ಒಂದು ಗಂಟೆಯಲ್ಲಿ ಏನು ವ್ಯತ್ಯಾಸವಾಗುತ್ತದೆ? ಇದುವರೆವಿಗೂ ವಿರೋಧಪಕ್ಷದ ನಾಯಕರುಗಳಿಗೆ ಮುಚ್ಚಿಟ್ಟು ಮಾಡುವಂತಹದ್ದು ಇಲ್ಲಿ ಏನೂ ಇಲ್ಲ. ನಾವೇನಾದರೂ ದೊಡ್ಡ ತಪ್ಪನ್ನು ಮಾಡಿ, ಅದನ್ನು ಮುಚ್ಚಿಡಲು ಚರ್ಚೆಯನ್ನು ಬೇಡವೆಂದು ಹೇಳುತ್ತಿಲ್ಲ. ಆ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. ತಾವು ಎಷ್ಟು ದಿವಸ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯವನ್ನು ನಿಗಧಿ ಮಾಡುತ್ತೀರೋ ಅದರ ಆಧಾರದ ಮೇಲೆ ಚರ್ಚೆಯನ್ನು ಮಾಡೋಣ. ಆದರೆ ಸರ್ವೋಚ್ಚ ನ್ಯಾಯಾಲಯದಲ್ಲಿರತಕ್ಕಂತಹ ಬಾಕಿ ಇರುವ ಪ್ರಕರಣಕ್ಕೆ ದಕ್ಕೆ ಬಾರದ ಹಾಗೆ ಅದನ್ನು ಗಮನದಲ್ಲಿಟ್ಟುಕೊಂಡು ಚಿಂತನೆಯನ್ನು ಮಾಡಿಕೊಂಡು, ಸರಿ ಎನ್ನುತಕ್ಕಂತಹ ಭಾಗವನ್ನು ಈ ಸದನದಲ್ಲಿ ಚರ್ಚೆ ಮಾಡಲು ತಂದರೆ ನಮ್ಮ ದೇನೂ ಅಭ್ಯಂತರವಿಲ್ಲ. ನಾಳೆಯ ದಿವಸ ಡಾ॥ ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಗೆ ತೊಂದರೆ ಯಾಗದಂತಹ ರೀತಿಯಲ್ಲಿ ನಾವು ಇಲ್ಲಿ ನಡೆದುಕೊಂಡು ಹೋಗು ವಂತದ್ದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅದನ್ನು ಅರಿತುಕೊಂಡು ನಾವಿಲ್ಲಿ ನಡವಳಿಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಪ್ರಶ್ನೋತ್ತರ ವೇಳೆಯನ್ನು ಮೊದಲು ತೆಗೆದುಕೊಳ್ಳಿ. ತದನಂತರ ಅದನ್ನು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ಯೋಚನೆ ಮಾಡಿ, ಬೇಕಾದರೆ, ತಾವು ನಮ್ಮೊಡನೆ ಮಾತನಾಡಲು ಕರೆಸಿದರೆ ನಾವು, ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರು ಬರುತ್ತೇವೆ, ಚರ್ಚೆ ಮಾಡಿ ಒಂದು ದಿನಾಂಕವನ್ನು ನಿರ್ಧರಿಸಿ. ಎಷ್ಟುದಿವಸಬೇಕಾದರೂ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಇಂದು ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಮತ್ತೆ ಈ ಬಗ್ಗೆ ದಿನಾಂಕವನ್ನು ನಿಗದಿ ಮಾಡುವುದು ಏನಿದೆ? ಇವತ್ತು ಡಾ॥ ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಗೆ ಅನಾನುಕೂಲವಾಗತಕ್ಕಂತಹ ರೀತಿಯಲ್ಲಿ ನಾವು ಮಾತನಾಡುತಕ್ಕಂಥಾದ್ದು ಏನಿಲ್ಲ. ಡಾ॥ರಾಜ್‌ಕುಮಾರ್‌ರವರು ಸುರಕ್ಷಿತವಾಗಿ ಬಿಡುಗಡೆಯಾಗಿ ಬರಬೇಕೆನ್ನುವುದು ನಮ್ಮೆಲ್ಲರ ಕಾಳಜಿ ಇದೆ. ಈ ಬಗ್ಗೆ ಆಡಳಿತ ಪಕ್ಷದವರು ನಮ್ಮ ವಿರೋಧ

ಪಕ್ಷದವರ ಹಾಗೂ ಇಡೀ ಕರ್ನಾಟಕ ಜನತೆಯ ಕಾಳಜಿ ಇದೆ. ಇದು 3 ತಿಂಗಳಿಂದ ನಡೆಯುತ್ತಿದೆ, ಈ ಬಗ್ಗೆ ಏನಾಗಿದೆ ಎನ್ನತಕ್ಕಂಥಾದನ್ನು ಇವತ್ತು ನಾವು ಪ್ರಶ್ನೆ ಮಾಡಬೇಕಾಗಿದೆ. ಹಾಗಾಗಿ ಇವತ್ತು ನಾವು ನಮ್ಮ ಚೌಕಟ್ಟಿನೊಳ್ಗೆ ಮಾತನಾಡುವುದಕ್ಕೆ ತಯಾರಿರುವಂತಹ ಸಂದರ್ಭದಲ್ಲಿ, ಮುಖ್ಯ ಕೇಂದ್ರಬಿಂದುವಿಗೆ ಧಕ್ಕೆಯಾಗುವಂತಹ ರೀತಿಯಲ್ಲಿ ಮಾತನಾಡದಿರುವುದಕ್ಕೆ ತಯಾರಿಲ್ಲದಿರುವ ಸಂದರ್ಭದಲ್ಲಿ ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ ಇವತ್ತು ವಿಧಾನಮಂಡಲದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ.

ಡಾ।।ರಾಜ್‌ಕುಮಾರ್ ಅವರ ಅಪಹರಣದ ವಿಷಯದಲ್ಲಿ ಏನು ಪ್ರಸ್ತಾಪ ಆಗುತ್ತಿದೆ, ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಕಾತರದಿಂದ ಜನ ನೋಡುತ್ತಿದ್ದಾರೆ. ಮಾನ್ಯ ಖರ್ಗೆಯವರು ಇದಕ್ಕೆ ಒಂದು ದಿನಾಂಕವನ್ನು ನಿಗದಿ ಮಾಡಬೇಕು ಎಂದು ಹೇಳಿದರು. ಇವತ್ತು ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಎಲ್ಲ ವಿಷಯಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಈ ದಿವಸಕ್ಕೆ ತೆಗೆದುಕೊಳ್ಳುವಂಥಾದ್ದು ಆಗಬೇಕು. ಅದರ ಸಲುವಾಗಿ ಒಂದು ಮೀಟಿಂಗ್, ಅದರ ಸಲುವಾಗಿ ಒಂದು ವಿಚಾರ ಮಾಡುವಂಥಾದ್ದೂ ಏನಿದೆ ಅದರ ಅವಶ್ಯಕತೆ ಇಲ್ಲ. ಮಾನ್ಯ ಅಧ್ಯಕ್ಷರಾದ ತಾವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವಂಥಾದ್ದೂ ಇದೆ. ಎಲ್ಲ ವಿಷಯಗಳನ್ನು ಬದಿಗೊತ್ತಿ ತಾವು ನಿರ್ಣಯ ತೆಗೆದುಕೊಳ್ಳುವಂಥಾದ್ದು ಆಗಬೇಕು. ಆದ್ದರಿಂದ ಇದರಿಂದ ತಾವು ತಕ್ಷಣ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(2) ಮಳೆ ಹಾನಿಯಿಂದ ಆಗಿರತ್ತಕ್ಕ ಕೊಂದರೆ ಕುರಿತು:-

+ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದರಲ್ಲಿ ಅರ್ಥ ಇದೆ. ಇದು ಮಹತ್ವದ ವಿಷಯ ಅಲ್ಲ ಎಂದು ನಾವು ಹೇಳತಕ್ಕದ್ದು ಅಲ್ಲ. ಮತ್ತು ಈ ರಾಜ್ಯ ದ ಜನತೆಯ ನಿರೀಕ್ಷೆ ಸಹ ಇದೆ. ಆದರೆ ಇವತ್ತು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೆಕಾದ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ. ಆ ರೀತಿ ತೆಗೆದುಕೊಳ್ಳುವುದಾದಾರೆ ಇವತ್ತು ಜನಸಾಮಾನ್ಯರಿಗೆ ಮತ್ತು ರೈತವರ್ಗಕ್ಕೆ, ಗ್ರಾಮಾಂತರ ಜನಕ್ಕೆ ಬಹಳ ಅನಾನುಕೂಲ ಆಗಿರತಕ್ಕಂಥಾದ್ದು, ಮಳೆಹಾನಿಯಿಂದ ನೂರಾರು ಕೋಟಿ ರೂಪಾಯಿಗಳಷ್ಟು ಹಾನಿಯಾಗಿರತಕ್ಕದ್ದು, ರಸ್ತೆಗಳು ಕೊಚ್ಚಿಕೊಂಡು ಹೋಗಿರತಕ್ಕಂಥಾದ್ದು ಇದೆ. ಆ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಾರ್ವಜನಿಕ ಆಸ್ತಿ ನಷ್ಟವಾಗಿದೆ ಎಂಬುದನ್ನು ಕೂಡ ನಾವು ಗಮನಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಏನು ಹೇಳುತ್ತಿದ್ದರೆ ಅದನ್ನು ಪ್ರಶ್ನೋತ್ತರ ವೇಳೆ ಆದನಂತರ ತೆಗೆದುಕೊಳ್ಳತಕ್ಕದ್ದು ಸೂಕ್ತ ಇದೆ. ಮತ್ತೆ ನಾವು ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಕೂಡ ಮಾನ್ಯ ಗೃಹ ಮಂತ್ರಿಗಳು ಕೆಲವು ಇತಿಮಿತಿಗಳಲ್ಲಿ ನಾವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಕೂಡ ಮಾನ್ಯ ಗೃಹ ಮಂತ್ರಿಗಳು ಕೆಲವು ಇತಿಮಿತಿಗಳಲ್ಲಿ ನಾವು ಮಾತನಾಡತಕ್ಕಂಥ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ. ಯಾವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಡಾ।। ರಾಜ್‌ಕುಮಾರ್ ಅವರು ಸುರಕ್ಷಿತವಾಗಿ ಅಲ್ಲಿಂದ ವಾಪಸ್ಸು ಬರಬೇಕು. ಇದೊಂದೇ ಗುರಿ ನಮ್ಮಲ್ಲರದ್ದೂ ಆಗಿರತಕ್ಕದ್ದು. ಮಾನ್ಯ ವಿರೋಧಪಕ್ಷದ ನಾಯಕರ ಗುರಿ ಕೂಡ